into the Bellary incidents for furnishing proceedings of the House relating to the subject. When the House is not in session and the proceedings are still under print the normal practice has been to permit supply of the proceedings by the Secretariat and then bring the matter to the Commission with specific instructions that the copies supplied should be exclusively for the use of the Commission and not to be quoted till the proceedings are printed.

ವರದಿಗಳ ಮಂಡನೆ

ವಿಷಯ: ಗೋಪಿನಾಥಂ ಕೆರೆಯ ಬಗ್ಗೆ:—ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿಯ ವರದಿ

ಶ್ರೀ ಎಂ. ವೀರಪ್ಪಮೊಯ್ಲಿ.—ಸ್ವಾಮಿ: ಈ ಕೆಳಕಂಡ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ವರದಿಯನ್ನು ನಾನು ಸಭೆಯ ಮುಂದೆ ಮಂಡಿಸುವುದಕ್ಕೆ ಇಷ್ಟಪಡುತ್ತೇನೆ.

"ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಏಳನೆಯ ವರದಿಯಲ್ಲಿ (1980–82) (ಆರನೇ ವಿಧಾನ ಸಭೆ) ನೀರಾವರಿ ಇಲಾಖೆಯ ಗೋಪಿನಾಥಂ ಕೆರೆಯ ನಿರ್ಮಾಣಕ್ಕೆ ಸಂಬಂಧಿಸಿದಂತೆ ಮೊದಲಾದ ಶಿಫಾರಸುಗಳ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಕ್ಕೆ ಸಂಬಂಧಿಸಿದಂತೆ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಮೊದಲನೆಯ ವರದಿ."

ನಿಯಮ 334ರ ಕೆಳಗೆ ಕಳುಹಿಸಿರುವ ವಿಷಯಗಳ ಬಗ್ಗೆ:

ವಿಷಯ: ಗುಲ್ಬರ್ಗದಲ್ಲಿ ಕ್ರಾಂತಿ ಪತ್ರಿಕೆ ಸಂಪಾದಕ ಶ್ರೀ ಸಿದ್ಧರಾಮೇಶ್ವರರವರನ್ನು ಪೋಲೀಸರು ಹೊಡೆದರು ಎಂಬ ಬಗ್ಗೆ.

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೆ, ಮೊನ್ನೆ ರೂಲ್ 334ರ ಪ್ರಕಾರ ಒಂದು ವಿಷಯವನ್ನು ಎತ್ತಿದಾಗ ಈಗ 5 ಗಂಟೆಯಾಗಿದೆ. ಆದ್ದರಿಂದ ಆಗುವುದಿಲ್ಲವೆಂದು ತಾವು ಸಭೆಯನ್ನು ಮುಂದಕ್ಕೆ ಹಾಕಿದಿರಿ. ಆದ್ದರಿಂದ ಅದನ್ನು ಇವತ್ತು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಈಗ ಬೇರೆ ವಿಚಾರವನ್ನು ತೆಗೆದುಕೊಳ್ಳೋಣ. ಈ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳಬೇಕಾದರೆ ಮಾನ್ಯ ಮುಖ್ಯ ಮಂತ್ರಿಯವರೇ ಬರಬೇಕೆಂದು ತಾವು ಕೇಳುತ್ತಿದ್ದೀರಿ. ಆದರೆ ಮಾನ್ಯ ಮುಖ್ಯ ಮಂತ್ರಿಗಳು ಬರಲಿಲ್ಲ. ಅವರು ಬರಲಿ...

ಶ್ರೀ ಧರ್ಮಸಿಂಗ್.—ಅವರು ಇಲ್ಲ ಎಂದರೆ ಅದು ಹೇಗಾಗುತ್ತದೆ? ಮುಖ್ಯ ಮಂತ್ರಿಗಳೇ ಬಂದು ನಮಗೆ ಹೇಳಿಕೆಯನ್ನು ಕೊಡಬೇಕೆಂದು ನಾವು ಕೇಳಿದ್ದೇವೆ. ಆದರೆ ಅವರು ಇವತ್ತೂ ಬಂದಿಲ್ಲ. ನಿನ್ನೆಯ ದಿವಸ ಇದರ ಬಗ್ಗೆ ಯಾವುದೇ ತೀರ್ಮಾನಕ್ಕೂ ಬರಲಿಲ್ಲ. ಆದ್ದರಿಂದ ಇವತ್ತು ಇದರ ಬಗ್ಗೆ ಚರ್ಚೆಯಾಗ ಬೇಕು.

ಅಧ್ಯಕ್ಷರು.—ತಾವು ಕೇಳಿದ್ದೀರಿ. ಅದು ರೆಕಾರ್ಡ್‌ನಲ್ಲಿದೆ. ಇಲ್ಲವೆಂದು ನಾನು ಹೇಳುವುದಿಲ್ಲ. ಇದಕ್ಕೆ ಸಂಬಂಧಪಟ್ಟ ರಾಜ್ಯ ಸಚಿವರು ಇದ್ದಾರೆ. ಅವರು ಉತ್ತರ ಕೊಡುವುದಾದರೆ ನನ್ನ ಅಭ್ಯಂತರ ಇಲ್ಲವೆಂದು ಅವರು ಹೇಳಿದ್ದಾರೆ. ಆದರೆ ಮಾನ್ಯ ಮುಖ್ಯ ಮಂತ್ರಿಗಳೇ ಬರಬೇಕೆಂದು ತಾವು ಒತ್ತಾಯ ಮಾಡುತ್ತಿದ್ದೀರಿ.

ಶ್ರೀ ಧರ್ಮಸಿಂಗ್.—ನಾವು ಎಲ್ಲ ರೀತಿಯಲ್ಲೂ ತಮಗೆ ಹೇಳಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳೇ ಬರಬೇಕೆಂದು ನಾವು ಕೇಳಿದ್ದೇವೆ. ಅವರು ಬರುತ್ತಾರೆ, ಅವರನ್ನು ಕರೆಸುತ್ತೇನೆಂದು ತಾವೂ ಹೇಳಿದ್ದೀರಿ. ನಾವು ಪದೇ ಪದೇ ಪ್ರಸ್ತಾಪ ಮಾಡಿದಾಗಲೂ ರಾಜ್ಯದ ಮುಖ್ಯ ಮಂತ್ರಿಗಳಾಗಿ ಪ್ರಮುಖವಾದ ಚರ್ಚೆಗೆ ಅವರು ಬರಲಿಲ್ಲ ಎಂದರೆ ನಾವು ಮುಂದಿನ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

(ಮುಂದಲ)